ಸಿಸಿ ಸಿದ್ದಾಪುರ ತಾಲ್ಲೂಕುಗಳಲ್ಲಿ ಮನೆಗಳನ್ನು ಮಾಡಿಂವ ಬಗ್ಗೆ

೮೭೦. ಶ್ರೀ ಗೋಪಾಲ ಮಂಕಂದ ಕಾನಡೆ (ಸಿಸಿ). —ಮಾನ್ಯ ಕಂದಾಯ, ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯಪಿಟ್ಟು ಉತ್ತರಿಸುವರೆ ?

(ಅ) ಉತ್ತರ ಕನ್ನಡ ಜಿಲ್ಲಾ ಸಿಸಿ ಸಿದ್ದಾಪುರ ತಾಲ್ಲೂಕುಗಳಲ್ಲಿ ಕಂದಾಯ ಇಲಾಖೆಯ ಜಮೀನುಗಳಲ್ಲಿ ಮನೆಗಳನ್ನು ಕಟ್ಟಿಕೊಂಡಿರುವುದು ಸರಕಾರದ ಗಮನಕ್ಕೆ ಬಂದಿದೆಯೆ ?

(ಆ) ಹಾಗಿದ್ದಲ್ಲಿ ಸದರಿ ನಿವೇಶನಗಳನ್ನು ಮಂಜೂರು ಮಾಡಲು ಏನು ಕ್ರಮ ತೆಗೆದುಕೊಳ್ಳಲಾಗಿದೆ,

(ಇ) ಈ ನಿವೇಶನಗಳನ್ನು ಪುಕ್ಕಟ್ಟೆಯಾಗಿ ಮಂಜೂರು ಮಾಡಲು ಸರಕಾರಕ್ಕೆ ಕೋರುವ ತೊಂದರೆಗಳೇನು,

(ಈ) ಈ ವಿಚಾರದಲ್ಲಿ ಮಂಜೂರು ಕೋರಿ ಬಂದಿರುವ ಅರ್ಜಿಗಳೆಷ್ಟು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು).—

(ಅ) ಸರ್ಕಾರದ ಗಮನಕ್ಕೆ ಬಂದಿರುತ್ತದೆ.

(ಆ) ಸರ್ಕಾರದ ಸುತ್ತೋಲೆ ಕ್ರ. ಆರ್‌ಡಿ ೫೨ ಎಲ್‌ಜಿಪಿ ೮೧, ದಿನಾಂಕ ೬-೮-೧೯೮೧ರ ಪರಿಮಿತಿಯಲ್ಲಿ ಬಂದಿರುವಂಥ ಸಿಸಿ ತಾಲ್ಲೂಕಿನ ೧೨೨ ಪ್ರಕರಣಗಳನ್ನು ಮತ್ತು ಸಿದ್ದಾಪುರ ತಾಲ್ಲೂಕಿನ ೧೮ ಪ್ರಕರಣಗಳನ್ನು ಕ್ರಮಬದ್ಧಗೊಳಿಸಿರುತ್ತದೆ. ಸದರಿ ಸುತ್ತೋಲೆಯ ಪರಿಮಿತಿಯಲ್ಲಿ ಬರದಿರುವ ಪ್ರಕರಣಗಳು ಬಾಕಿ ಉಳಿದಿರುತ್ತವೆ.

(ಇ) ಭೂ ಮಂಜೂರಾತಿ ನಿಯಮದಲ್ಲಿ ನಿವೇಶನಗಳನ್ನು ಪುಕ್ಕಟೆಯಾಗಿ ಮಂಜೂರು ಮಾಡುವ ಬಗ್ಗೆ ಅವಕಾಶವಿರುವುದಿಲ್ಲ.

(ಈ) ಸಿಸಿ ತಾಲ್ಲೂಕು ೩೭೪ ಸಿದ್ದಾಪುರ ೨೭
ಪ್ರಕರಣಗಳು ಮಂಜೂರಾತಿ ಕೋರಿ ಬಂದಿರುತ್ತವೆ.

ಬೀಡಿ ಕಾರ್ಮಿಕರ ವೇತನದ ಬಗ್ಗೆ

೨೫೮. ಶ್ರೀ ಎಂ.ಎಸ್.ಕೃಷ್ಣನ್,(ರಾಜಾಜಿನಗರ).—ಮಾನ್ಯ ಕಂದಾಯ, ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಬೀಡಿ ಕಾರ್ಮಿಕರ ಮಾಲೀಕರ ನಡುವೆ ಒಪ್ಪಂದವಾಗಿ ವೇತನ ನಿಗದಿಯಾಗಿರುವುದು ಸರ್ಕಾರಕ್ಕೆ ತಿಳಿದಿದೆಯೇ ? ಇದರ ಪ್ರಕಾರ ಕನಿಷ್ಠ ವೇತನ ಎಷ್ಟು ? (ಒಪ್ಪಂದದ ತಾರೀಖು ತಿಳಿಸಿ)

(ಆ) ಬೀಡಿ ಕಾರ್ಮಿಕರಿಗೆ ಕಾನೂನಿನ ಅನ್ವಯ ಸರ್ಕಾರ ನಿಗದಿ ಮಾಡಿರುವ ಕನಿಷ್ಠ ಕೂಲಿಯೆಷ್ಟು, ಹಾಗೂ ಆ ಬಗ್ಗೆ ಹೊರಡಿಸಿರುವ ಸರ್ಕಾರಿ ಆಜ್ಞೆಯ ತಾರೀಖನ್ನು ತಿಳಿಸುವುದು ?

(ಇ) ಸಿನಿಮಾ ಹೋಟೆಲ್ ಉದ್ಯಮಗಳಲ್ಲಿ ಸರ್ಕಾರ ನಿಗದಿ ಮಾಡಿರುವ ಕನಿಷ್ಠ ಕೂಲಿ ಎಷ್ಟು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಯೋಜನಾ ಹಾಗೂ ಕಾರ್ಮಿಕ ಸಚಿವರು).—

(ಅ) ಹೌದು. ೨೬-೫-೧೯೮೫ರ ಒಪ್ಪಂದದ ಪ್ರಕಾರ ನಿಗದಿಯಾದ ವೇತನ ರೂ. ೮-೮೦ ಮತ್ತು ಗ್ರಾಹಕ ಬೆಲೆ ಸೂಚ್ಯಾಂಕದ ಪ್ರತಿ ಅಂಶ ಏರಿಕೆಗೆ ೨ ಪೈಸೆಯಂತೆ ತುಟ್ಟಿಭತ್ಯೆಯನ್ನು ನಿಗದಿ ಮಾಡಲಾಯಿತು. ೧೯೮೫ರ ಡಿಸೆಂಬರ್ ಕೊನೆವರೆಗೆ ಮೂಲ ವೇತನ ಮತ್ತು ತುಟ್ಟಿಭತ್ಯೆ ಸೇರಿ ರೂ. ೧೧-೪೮ ಆಗುತ್ತದೆ.

(ಆ) ಒಂದು ಸಾವಿರ ಬೀಡಿ ಸುತ್ತಲು ರೂ. ೧೧-೫೦ ಕನಿಷ್ಠ ವೇತನವನ್ನು ಅಧಿಸೂಚನೆ ಕ್ರಮಾಂಕ ಎಸ್‌ಡಬ್ಲ್ಯೂಎಲ್ ೬೧ ಎಲ್‌ಎಂಡಬ್ಯು ೮೨ ದಿನಾಂಕ ೨೫-೭-೧೯೮೬ರಲ್ಲಿ ನಿಗದಿಗೊಳಿಸಿದೆ.